ಶ್ರೀ ಬಿ. ಎಸ್. ಯಡಿಯೂರಪ್ಪ – ಸ್ವಾಮಿ, ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನು. ಆಗಸ್ಟ್ ಮಧ್ಯ ಭಾಗದಲ್ಲಿ ಜಿಲ್ಲಾ ಪರಿಷತ್ ಸಭೆ ಸೇರಿದಾಗ, ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದೇ ಕೃಷಿ ಇಲಾಖೆಯಲ್ಲಾಗಲೀ, ಒಂದು ಕೆ. ಜಿ. ರಾಗಿ, ಜೋಳ, ಸೂರ್ಯಕಾಂತಿ ಬೀಜ ಇರಲಿಲ್ಲ. ಈ ಅಂಶವನ್ನು ನಿಮ್ಮ ಕೃಷಿ ಅಧಿಕಾರಿಗಳೇ ಹೇಳಿದ್ದಾರೆ. ನಾನು ಹೇಳತಕ್ಕಂಥಾದ್ದು ಅಸತ್ಯವಾಗಿದ್ದರೆ, ನೇರವಾಗಿ ನಿಮ್ಮ ಅಧಿಕಾರಿಗಳನ್ನೇ ಕೇಳಿ. ಆಗಸ್ಟ್ ಮಧ್ಯ ಭಾಗದಲ್ಲಿ ಕೃಷಿ ಇಲಾಖೆಯಲ್ಲಿ ಎಷ್ಟೆಷ್ಟು ರಾಗಿ, ಜೋಳ, ಸೂರ್ಯಕಾಂತಿ ಇತ್ತೆಂಬುದನ್ನು ಓದಗಿಸಿಕೊಡುತ್ತೀರಾ ? ಬೀಜಗಳನ್ನು ಮುಂದಾಲೋಚನೆಯಿಂದ ಸಂಗ್ರಹಣೆ ಮಾಡುವಂಥ ಜವಾಬ್ದಾರಿ ಅಧಿಕಾರಿಗಳಿಗೆ ಇರಲಿಲ್ಲವೇ ? ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಬೀಜದ ದಾಸ್ತಾನು ಇದೆ ಎಂಬ ವಿವರ ಕೊಡುತ್ತೀರಾ ?

ಶ್ರೀ ಆರ್. ವಿ ದೇಶಪಾಂಡೆ – ಮಾನ್ಯ ಸದಸ್ಯರಿಗೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ವಿವರ ಕೊಡುತ್ತೇನೆ. ೫೧,೦೦೦ ಕ್ವಿಂಟಾಲ್ ಬೀಜವನ್ನು ಇಡೀ ರಾಜ್ಯದಲ್ಲಿ ದಾಸ್ತಾನು ಮಾಡಲಾಗಿದೆ. ಸೂರ್ಯಕಾಂತಿ ಒಂದನ್ನು ಬಿಟ್ಟು ಉಳಿದೆಲ್ಲಾ ಬೀಜಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ – ನಾನು ಶಾಸಕನಾಗಿ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಆಗಸ್ಟ್ ತಿಂಗಳ ಮಧ್ಯ ಭಾಗದಲ್ಲಿ ಜಿಲ್ಲಾ ಪರಿಷತ್ತು ಸಭೆಯಲ್ಲಿ ಒಂದು ಕೆ. ಜಿ. ರಾಗಿ, ಜೋಳ, ಇಲ್ಲ ಎಂದು ಹೇಳಿದ್ದಾರೆ, ಅದು ರೆಕಾರ್ಡ್ ಆಗಿದೆ.

ಶ್ರೀ ಆರ್. ವಿ. ದೇಶಪಾಂಡೆ – ಸೂರ್ಯಕಾಂತಿ ಬಗ್ಗೆ ಒಪ್ಪಿಕೊಂಡಿದ್ದೇನೆ, ಶಿವಮೊಗ ಜಿಲ್ಲೆಗೆ ೧೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ – ಬೀಜ ಕೊಡುವುದಕ್ಕೆ ?

ಶ್ರೀ ಆರ್. ವಿ. ದೇಶಪಾಂಡೆ – ಹೌದು, ಬೀಜ, ಗೊಬ್ಬರ, ಪುಕ್ಕಟೆಯಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

2) ಆರ್.ಎಲ್.ಇಜಿ.ಪಿ. ಹಾಗೂ ಡಿ.ಪಿ.ಎ.ಪಿ. ಯೋಜನೆಗಳ ಅಡಿಯಲ್ಲಿ ನಿಗದಿಪಡಿಸಿರುವ ಕೂಲಿಯ ಬಗ್ಗೆ.

ಶ್ರೀ ಬಿ. ಬಸವಲಿಂಗಪ್ಪ – ಮಾನ್ಯ ಅಧ್ಯಕ್ಷರೆ, ಆರ್. ಎಲ್. ಇ. ಜಿ. ಪಿ. ಎನ್. ಆರ್. ಇ. ಪಿ, ಡಿ. ಪಿ. ಎ. ಪಿ ಹಾಗೂ ಎ. ಡಿ. ಪಿ. ಯೋಜನೆಗಳಡಿಯಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರಿಗೆ ಕೂಲಿಯನ್ನು ನಿಗದಿಪಡಿಸಿರುವ ಬಗ್ಗೆ ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಯವರು).—

ಸರ್ಕಾರಿ ಸುತ್ತೋಲೆಯ ಸಂಖ್ಯೆ/ಆರ್‌ಡಿಪಿ/ಎಡಿಪಿ/೨೮/ಎನ್‌ಆರ್‌ಇ/೮೭, ದಿನಾಂಕ ೬ನೇ ಫೆಬ್ರುವರಿ ೧೯೮೭ರ ಪ್ರಕಾರ ೧೯೮೭ನೇ ಫೆಬ್ರವರಿ ಮಾಹೆಯಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ ಮತ್ತು ಗ್ರಾಮೀಣ ಉದ್ಯೋಗ ಭರವಸೆ ಯೋಜನೆಗಳಡಿಯಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ದಿನ ಒಂದಕ್ಕೆ ರೂ. ೮–೨೫ ಪೈಸೆಗಳು ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿತ್ತು.

ಆನಂತರ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವಾಲಯದ ಅಧಿಸೂಚನೆ ಸಂಖ್ಯೆ/ಎಸ್‌ಡಬ್ಲ್ಯೂಎಲ್/೬೧/ಎಲ್‌ಎಂಡಬ್ಲ್ಯೂಬಿ/೮೭, ದಿನಾಂಕ ೧೮ನೇ ಜೂನ್ ೧೯೮೭ರಂತೆ ನೈಪುಣ್ಯ ವಲ್ಲದ ಕೂಲಿಕಾರರಿಗೆ ದಿನ ಒಂದಕ್ಕೆ ಕನಿಷ್ಠ ವೇತನ ರೂ. ೭–೮೦ ಮತ್ತು ೨–೦೦ ತುಟ್ಟಿಭತ್ಯೆ ಹೀಗೆ ಒಟ್ಟು ರೂ. ೯–೮೦ನ್ನು ಬಳಕೆದಾರರ ಸೂಚ್ಯಾಂಕವು ೭೮೦ಕ್ಕೆ ಏರಿದ್ದರಿಂದ ನಿಗದಿಪಡಿಸಲಾಯಿತು.

ಆದುದರಿಂದ ರಾಜ್ಯದ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಕೆಲಸ ಮಾಡುವ ನೈಪುಣ್ಯತೆ ಇಲ್ಲದ ಕೂಲಿಕಾರರಿಗೆ ಕನಿಷ್ಠ ವೇತನವನ್ನು ದಿನಾಂಕ ೧ನೇ ಸೆಪ್ಟೆಂಬರ್ ೧೯೮೭ ರಿಂದ ರೂ. ೯–೮೦ಕ್ಕೆ ನಿಗದಿಪಡಿಸಲಾಗಿದೆ ಮತ್ತು ನೈಪುಣ್ಯತೆ ಇಲ್ಲದ ಕೂಲಿಕಾರರ ಕನಿಷ್ಠ ದಿನಕೂಲಿಯನ್ನು ಪರಿಷ್ಕರಿಸುವುದಾದರೆ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಸಚಿವಾಲಯದಿಂದ

ಪ್ರಸ್ತಾವನೆ ಧೃಢೀಕರಿಸಿದ್ದಲ್ಲಿ ಇದನ್ನು ಗ್ರಾಮೀಣಾಭಿವೃದ್ಧಿ ಮಂತ್ರಿ ಪಂಚಾಯತ್ ರಾಜ್ ಇಲಾಖೆಯಲ್ಲಿ ಅಳವಡಿಸಲಾಗುವುದು.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೆ, ಈಗ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರು ಏನಿದ್ದಾರೆ ಅವರಿಗಾಗಿ ರೂ. ೯–೮೦ ಪೈಸೆಯನ್ನು ನಿಗದಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ನನ್ನ ಪ್ರಶ್ನೆ ಇಷ್ಟೆ, ಕನ್‌ಸ್ಯೂಮರ್ ಇಂಡೆಕ್ಸ್ ಎಂದು ಏನಿದೆ ಇದು ದೇಶಕ್ಕೆ ತೀರ್ಮಾನ ಮಾಡತಕ್ಕ ಸಂಸ್ಥೆ ಇದೆ. ಅದರ ವಿಚಾರದಲ್ಲಿ ನಾನು ಏನು ಹೇಳಬೇಕೆಂದು ಗೊತ್ತಾಗುವುದಿಲ್ಲ. ಕಾರಣ ಅಂದರೆ ಈ ಕನ್‌ಸ್ಯೂಮರ್ ಇಂಡೆಕ್ಸ್ ತೀರ್ಮಾನ ಮಾಡುವವರು ಯಾರು ? ಈಗ ಸರ್ಕಾರಿ ನೌಕರರು ಯಾವ ವರ್ಗಕ್ಕೆ ಸೇರುತ್ತಾರೆ ? ಇವರು ಯಾರು ಬಂಡವಾಳ ಶಾಹಿ ಇದ್ದಾರೆ ಅವರ ಪ್ರತಿನಿಧಿಗಳಾಗಿದ್ದಾರೆ. ಸರ್ಕಾರಿ ನೌಕರರು ಏನಿದ್ದಾರೆ ಅವರಿಗೆ ಕನ್‌ಸ್ಯೂಮರ್ ಇಂಡೆಕ್ಸ್ ಫಿಕ್ಸ್ ಮಾಡುತ್ತಾರೆ. ಇವೊತ್ತಿನ ದಿವಸ ಸರ್ಕಾರಿ ನೌಕರರಿಗೆ ಸಾವಿರಾರು ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಕನ್‌ಸ್ಯೂಮರ್ ಇಂಡೆಕ್ಸ್ ಇವರಿಗೆ ಬೇರೆ ಇದೆಯೇ ? ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡತಕ್ಕವರು ಏನಿದ್ದಾರೆ ಅವರಿಗೆ ಬೇರೆ ಕನ್‌ಸ್ಯೂಮರ್ ಇಂಡೆಕ್ಸ್ ಇದೆಯೇ ? ಅವರದು ಕನ್‌ಸ್ಯೂಮರ್ ಇಂಡೆಕ್ಸ್ ಎಷ್ಟು, ಇವರದು ಕನ್‌ಸ್ಯೂಮರ್ ಇಂಡೆಕ್ಸ್ ಎಷ್ಟು ? ಈಗ ಇವರಿಗೆ ರೂ. ೯–೮೦ ಪೈಸೆ ನಿಗದಿ ಮಾಡಿರುವುದಕ್ಕೆ ಆಧಾರ ಏನು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ನಾನು ಉತ್ತರಿಸುವ ಹಂತದಲ್ಲಿ ಇಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ ಮತ್ತು ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯಲ್ಲಿ ದಿನಕೂಲಿ ಎಷ್ಟು ಕೊಡುತ್ತೇವೆ ಎನ್ನುವುದನ್ನು ಹೇಳಿದ್ದೇವೆ. ಮಾನ್ಯ ಸದಸ್ಯರು ಕನ್‌ಸ್ಯೂಮರ್ ಇಂಡೆಕ್ಸ್ ಬಗ್ಗೆ ಪ್ರಸ್ತಾಪ ಮಾಡುತ್ತಾ ಸರ್ಕಾರಿ ನೌಕರರಿಗೆ ಒಂದು ಕನ್‌ಸ್ಯೂಮರ್ ಇಂಡೆಕ್ಸ್ ಇದ್ದು ಇವರಿಗೆ ಬೇರೆ ಕನ್‌ಸ್ಯೂಮರ್ ಇಂಡೆಕ್ಸ್ ಇದೆಯೇ ಎಂಬ ಪ್ರಶ್ನೆ ಕೇಳಿದ್ದಾರೆ. ಇವೊತ್ತು ಲೇಬರ್ ಅಂಡ್ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಏನು ನಿಗದಿ ಮಾಡುತ್ತಾರೆ ಅದನ್ನು ನಾವು ಅಳವಡಿಸಿಕೊಳ್ಳುತ್ತೇವೆ. ಅವರು ೫೦ ರೂಪಾಯಿ ಕೊಡಬೇಕೆಂದರೆ, ನಾನು ಕೊಡುತ್ತೇನೆ. ಆದ್ದರಿಂದ, ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಲೇಬರ್ ಮತ್ತು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್‌ಗೆ ಕೇಳಬೇಕು, ನಾನು ಇದಕ್ಕೆ ಉತ್ತರ ಹೇಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ ಬಸವಲಿಂಗಪ್ಪ —ಅಧ್ಯಕ್ಷರೇ, ಇದಂ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳತಕ್ಕ ನಿಲುವು. ಮಾನ್ಯ ಮಂತ್ರಿಗಳು ಪಂಚಾಯತ್ ರಾಜ್ ಮಂತ್ರಿಗಳಾಗಿದ್ದಾರೆ. ಇಲ್ಲ ಅಂದರೆ ನೀವು ಸಿಟಿ ಮಿನಿಸ್ಟರ್ ಎಂದು ಹೇಳಿ. ನೀವು ಪಂಚಾಯತ್ ರಾಜ್ ಮಂತ್ರಿಗಳಾಗಿರುವುದರಿಂದ ಗ್ರಾಮಾಂತರ ಪ್ರದೇಶದ ಜನರ ಯೋಗಕ್ಷೇಮವನ್ನು ನೋಡತಕ್ಕ ಜವಾಬ್ದಾರಿ ನಿಮ್ಮದು. ಸರ್ಕಾರಿ ನೌಕರರು ಏನಿದ್ದಾರೆ ಅವರಿಗೆ ಮಾತ್ರ ಕನ್‌ಸ್ಯೂಮರ್ ಇಂಡೆಕ್ಸ್ ಬದಲಾವಣೆಯಾಗುತ್ತದೆ. ಇವರಿಗೆ ಬದಲಾವಣೆಯಾಗುವುದಿಲ್ಲವೇನು ? ಇವರೇನು ಮನುಷ್ಯರಲ್ಲವೋ, ನಾಗರೀಕರಲ್ಲವೋ ? ಇದಕ್ಕೆ ಯಾವ ತರಹ ನಿರ್ಧಾರ ಮಾಡಿದ್ದೀರಿ ? ಈಗ ತಾವು ಮಾಡಿರುವುದು ಮನುಷ್ಯ ಜೀವನದಲ್ಲಿ ವ್ಯತಿರಿಕ್ತವಾಗುತ್ತದೆ. According to the Constitution , ...

MR. SPEAKER.—Living index means honourable living of an individual who works and who represents the country. What is living index. Whether the Government has found out ? Have they taken into account their living index ? How much they are paid—let them say specifically ? The Government cannot escape from this responsibility. Let the Government fix the cost of living index of the poor people in comparison with the All India level.....

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ವಾದದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅದಕ್ಕೆ ಉತ್ತರಿಸುವ ಜವಾಬ್ದಾರಿ ನನಗೆ ಬರುವುದಿಲ್ಲ. ಗ್ರಾಮಾಂತರ

ಪ್ರದೇಶದಲ್ಲಿ ಕೆಲಸ ಮಾಡತಕ್ಕವರ ಬಗ್ಗೆ ಮಾನ್ಯ ಸದಸ್ಯರ ಕಳಕಳಿ ಏನು ಎನ್ನುವುದು ಅರ್ಥವಾಗಿದೆ. ಒಂದು ಕಡೆ ಸಂಘಟಿತ ವರ್ಗ, ಮತ್ತೊಂದು ಕಡೆ ಅಸಂಘಟಿತ ವರ್ಗ, ಅಸಂಘಟಿತ ವರ್ಗಕ್ಕೆ ಜೀವನಾಂತ ನಿಗದಿಪಡಿಸುವುದು ಸರಿಯಾಗಿ ಆಗುತ್ತಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಉತ್ತರಿಸಬೇಕಾದವರು ಮಾನ್ಯ ಕಾರ್ಮಿಕ ಸಚಿವರು

ಅಧ್ಯಕ್ಷರು.—ನೀವು ಮತ್ತು ಅವರು ಇಬ್ಬರೂ ಸೇರಿ ಡಿಸ್‌ಕಸ್ ಮಾಡಿ. ಈಗ ಮಾಡಿರತಕ್ಕ ರೂ. ೯-೮೦ ಪೈಸೆಯನ್ನು ರೌಂಡ್ ಫಿಗರ್ ಮಾಡಿ ೧೦ ರೂಪಾಯಿ ಎಂದು ಮಾಡುವುದು ಒಳ್ಳೆಯದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದನ್ನು ವಿಚಾರ ಮಾಡಂತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನನಗೆ ಸ್ಪಷ್ಟವಾದ ಉತ್ತರ ಬೇಕು. ೨೯.೮.೮೭ ರಂದು ನಿಮ್ಮ ಆರ್. ಡಿ. ಸಿ. ಡೆಪ್ಯುಟಿ ಸೆಕ್ರೆಟರಿಯವರ ಆಫೀಸ್‌ನಿಂದ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದರ ಪ್ರಕಾರ ಒಂದು ದಿವಸಕ್ಕೆ ರೂ. ೯.೮೦ ಪೈಸೆ ಅನ್ ಸ್ಕಿಲ್ಡ್ ಲೇಬರರ್ಸ್‌ಗೆ ತಾರೀಖು : ೧-೯-೧೯೮೭ ರಿಂದ ಕೊಡಬೇಕೆಂಡು ಹೇಳಿದ್ದಾರೆ. ಈಗ ತಾವು ಏನು ಹೇಳುತ್ತಿದ್ದೀರಿ. ಎಂದರೆ, ನಾವು ಇದಕ್ಕೆ ಜವಾಬ್ದಾರರಲ್ಲ. ಕಾರ್ಮಿಕ ಇಲಾಖೆಯವರು ಇದಕ್ಕೆ ಜವಾಬ್ದಾರರು, ಅವರು ಹೆಚ್ಚು ಕೊಡುವುದಕ್ಕೆ ಪ್ರಯತ್ನ ಮಾಡಿದರೆ ನಾನೂ ಪ್ರಯತ್ನ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ. ನಾನು ತಮ್ಮನ್ನು ಒಂದು ಮಾತನ್ನು ಕೇಳುತ್ತೇನೆ. ಇತ್ತೀಚೆಗೆ ಕೇಂದ್ರ ಸರ್ಕಾರ ಒಂದು ತೀರ್ಮಾನವನ್ನು ಮಾಡಿದೆ. ಕೇಂದ್ರ ಸರ್ಕಾರದ ಕಾರ್ಮಿಕ ಸಚಿವರು ಎಲ್ಲಾ ರಾಜ್ಯಗಳ ಕಾರ್ಮಿಕ ಮಂತ್ರಿಗಳನ್ನು ಕರೆದಿದ್ದರು. ಅದಕ್ಕೆ ನಮ್ಮ ಕಾರ್ಮಿಕ ಮಂತ್ರಿಗಳೂ ಕೂಡ ಹೋಗಿ ಒಂದಿದ್ದಾರೆ. ಕೃಷಿ ಕಾರ್ಮಿಕರೆಲ್ಲರೂ ನುರಿತಿರತಕ್ಕವರು. ಅವರಿಗೆ ೧ ದಿವಸಕ್ಕೆ ೧೧ ರೂಪಾಯಿಗಳನ್ನು ಕೊಡ ಬೇಕೆಂದು ಮಾಡಿದ್ದಾರೆ. ಆದರೆ ಅದರ ಪ್ರಕಾರ ನೀವು ಏತಕ್ಕೆ ತೀರ್ಮಾನ ಮಾಡಲಿಲ್ಲ ? ಅಲ್ಲಿ ಮಾಡಿರತಕ್ಕ ತೀರ್ಮಾನ ರಾಜ್ಯದ ಎಲ್ಲ ಇಲಾಖೆಗಳಿಗೂ ಅನ್ವಯಿಸುತ್ತದೆ. ನೀವು ಕಾರ್ಮಿಕ ಇಲಾಖೆಯ ಮೇಲೆ ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಮಾಡಿರತಕ್ಕ ನಿರ್ಧಾರವನ್ನು ನೀವು ಏತಕ್ಕೆ ಮಾಡಲಿಲ್ಲ ?

ಇನ್ನು ಎರಡನೆಯದಾಗಿ, ಮಾನ್ಯ ಕಾರ್ಮಿಕ ಖಾತೆ ಸಚಿವರಾದ ಶ್ರೀ ಕಾಂತರವರು ಅಲ್ಲಿಂದ ಬಂದಮೇಲೆ ಏನು ಹೇಳಿದರು ಎಂದರೆ, ನಮ್ಮ ರಾಜ್ಯದಲ್ಲಿ ೧೧ ರೂಪಾಯಿಗಳನ್ನು ಕೊಡುವುದು ಬೇಡ, ೧೨ ರೂಪಾಯಿಯಂತೆ ಮಾಡುತ್ತೇವೆಂದು ಹೇಳಿದ್ದಾರೆ. ಕಾರ್ಮಿಕ ಸಚಿವರಾದ ಶ್ರೀಕಾಂತ್‌ರವರೇ ೧೨ ರೂಪಾಯಿ ಮಾಡುತ್ತೇವೆಂದು ಹೇಳಿರುವಾಗ ನೀವು ರೂ. ೯.೮೦ ಎಂದು ಮಾಡಿದಂಥ ಔಚಿತ್ಯ ವಾದರೂ ಏನಿತ್ತು ?

ಇನ್ನು ಮೂರನೆಯದಾಗಿ, ತಮ್ಮ ಉತ್ತರದಲ್ಲಿ ಏನು ಹೇಳಿದ್ದೀರೆಂದರೆ, ಒಂದು ದಿವಸಕ್ಕೆ ೭.೮೦ ರೂಪಾಯಿ ಕೂಲಿ ಮತ್ತು ೨ ರೂಪಾಯಿ ತುಟ್ಟಿ ಭತ್ಯೆ, ಒಟ್ಟು ರೂ. ರೂ. ೯.೮೦ ಎಂದು ನಿಗದಿ ಮಾಡಿದ್ದೀರಿ. ಇದರಲ್ಲಿ ತುಟ್ಟಿ ಭತ್ಯೆ ಎನ್ನತಕ್ಕ ಪದವನ್ನು ತಾವು ಉಪಯೋಗಿಸಿದ್ದೀರಿ. ಅಂದರೆ ಆಹಾರ ಪದಾರ್ಥಗಳ ಬೆಲೆಗಳು ಜಾಸ್ತಿಯಾದಾಗ, ಜೀವನದ ಸೂಚ್ಯಂಕ ಜಾಸ್ತಿಯಾದಾಗ ಈ ತುಟ್ಟಿ ಭತ್ಯೆವನ್ನು ಕೊಡಬೇಕೆಂದು ನೀವು ಹೇಳಿದ್ದೀರಿ ಈ ಒಂದು ಆಧಾರದ ಮೇಲೆ ನೀವು ತುಟ್ಟಿ ಭತ್ಯೆವನ್ನು ಕೊಡತಕ್ಕಂಥಾದ್ದು. ನನಗೆ ತಿಳಿದಮಟ್ಟಿಗೆ ೫ ಪಾಯಿಂಟ್‌ಗೆ ೨ ರೂಪಾಯಿ ಎಂದು ಫಿಕ್ ಮಾಡಿದ್ದೀರಿ. ಇದರ ಪ್ರಕಾರ ನೀವು ಅವರಿಗೆ ಕೊಡುತ್ತೀರಾ ಎಂಬುದನ್ನು ಹೇಳಬೇಕು.

ಇನ್ನು ನಾಲ್ಕನೆಯದಾಗಿ, ಸಂಘಟಿತ ಕಾರ್ಮಿಕರು ಅಥವಾ ನಮ್ಮ ರಾಜ್ಯದಲ್ಲಿ ನುರಿತಿಲ್ಲದ ಕಾರ್ಮಿಕರಿಗೆ ಒಂದು ತಿಂಗಳಿಗೆ ೭೫೦ ರೂಪಾಯಿ ಎಂದು ನಿಗದಿ ಮಾಡಿದ್ದೀರಿ. ಅಂದರೆ ಒಂದು ದಿವಸಕ್ಕೆ ಇವರಿಗೆ, ಸುಮಾರು ೨೫ ರೂಪಾಯಿ ಕೊಡುತ್ತೀರಿ. ಆದರೆ ಅವರಿಗೆ ರೂ. ೯.೮೦ ಪೈಸೆಯನ್ನು ಕೊಡುತ್ತೀದ್ದೀರಿ. ಅಂದರೆ ನಿಮ್ಮ ಲೇಬರ್ ಮಂತ್ರಿಗಳು ತೆಗೆದುಕೊಂಡಿರತಕ್ಕ ತೀರ್ಮಾನಕ್ಕೆ ವಿರುದ್ಧವಾಗಿ ಕೊಟ್ಟಿದ್ದೀರಿ...

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ನಾನು ಮೊದಲೇ ಹೇಳಿದ್ದೇನೆ. ಕೇಂದ್ರ ಸರ್ಕಾರದ ನಿರ್ಣಯ ಮತ್ತು ನಮ್ಮ ರಾಜ್ಯ ಸರ್ಕಾರದ ನಿರ್ಣಯ ಎರಡನ್ನೂ ಕೂಡ ತಾವು ಹೇಳಿದ್ದೀರಿ. ಆದರೆ

ಆ ನಿರ್ಣಯಗಳು ನನಗೆ ಗೊತ್ತಿಲ್ಲ. ನಮ್ಮ ಸರ್ಕಾರದ ಲೇಬರ್ ಇಲಾಖೆಯವರು ದಿನಗೂಲಿಯನ್ನು ನಿಗದಿ ಮಾಡಿರತಕ್ಕದ್ದು. ಆ ಪ್ರಕಾರ ನನ್ನ ಇಲಾಖೆಯಲ್ಲಿ ಆದೇಶವನ್ನು ಜಾರಿಗೆ ತರತಕ್ಕದ್ದು ನನ್ನ ಜವಾಬ್ದಾರಿ. ಆದರ ಪ್ರಕಾರ ನಾನು ಸುತ್ತೋಲೆಯನ್ನು ಕೊಟ್ಟಿದ್ದೇನೆ,

ಇನ್ನು ಎರಡನೆಯದಾಗಿ ಕೇಂದ್ರ ಸರ್ಕಾರದವರು ದಿನಗೂಲಿಯನ್ನು ಹೆಚ್ಚಿಗೆ ಮಾಡಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ. ಅವರು ಕೊಟ್ಟಿದ್ದರೆ ನಾವು ಕೊಡುತ್ತೇವೆ ಕಾನೂನು ಪ್ರಕಾರ ನಾವು ಇಲ್ಲಿ ಕ್ರಮ ತೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ. ಆದರೆ ಸುತ್ತೋಲೆಯನ್ನು ನಮ್ಮ ಸರ್ಕಾರದಿಂದ ಹೊರಡಿಸುವವರೆಗೂ ನಾವು ಹೆಚ್ಚು ಹಣವನ್ನು ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ತುಟ್ಟಿ ಭತ್ಯದ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—೭೦೦ನ್ನು ಸೂಚ್ಯಂಕವಾಗಿಟ್ಟುಕೊಂಡು ಒಂದು ದಿವಸಕ್ಕೆ ಇಷ್ಟು ಎಂದು ಹೆಚ್ಚಿಗೆ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರೂ. ೯.೮೦ ಎಂದು ಕೊಟ್ಟಿದ್ದೀರಿ. ಆದರೆ ಇದನ್ನು ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್‌ಗೆ ಹೇಗೆ ಲಿಂಕ್ ಮಾಡುತ್ತೀರಿ ? ಇದನ್ನು ನನಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ವಾಮಿ, ನಾವು ಮೊದಲು ಸರ್ಕಾರದ ಪ್ರಕಟಣೆಯ ಪ್ರಕಾರ ರೂ. ೮.೭೦ನ್ನು ಕೊಡುತ್ತಿದ್ದೇವು. ಆದರೆ ಇವತ್ತು ರೂ. ೯.೮೦ನ್ನು ಏತಕ್ಕೆ ಕೊಡುತ್ತಿದ್ದೇವೆಂದರೆ, ಕಾರ್ಮಿಕ ಇಲಾಖೆಯವರು ಕನಿಷ್ಠ ವೇತನ ರೂ. ೭೮೦ ಮತ್ತು ತುಟ್ಟಿ ರೂ. ೨೦೦ ಭತ್ಯೆ ಎಂದು ಮಾಡಿದ್ದಾರೆ. ಸ್ವಾಮಿ, ಈ ಇಡೀ ಪ್ರಶ್ನೆ ಅವರಿಗೆ ಹೋಗಬೇಕಾದುದು. ಅವರಿಂದ ಬಹುಶಃ ಸಮರ್ಪಕವಾದ ಉತ್ತರ ಬರುತ್ತದೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎನ್ ಆರ್ ಇ ಪಿ, ಆರ್ ಎಲ್ ಇ ಜಿ ಪಿ, ಕಾರ್ಯಕ್ರಮಗಳಲ್ಲಿ ೮-೨೫ ಪೈಸೆ ಜನರಿಗೆ ಕೂಲಿ ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿರುತ್ತದೆಯೇ ? ಈವತ್ತಿನವರೆಗೂ ಅದೇ ರೀತಿ ನಡೆಯುತ್ತಿದೆ ಅದಕ್ಕೋಸ್ಕರವಾಗಿ ರಸೀದಿಗಳನ್ನೂ ಕೂಡ ಕೊಡುತ್ತಿದ್ದಾರೆ. ಯಾವ ಅಧಿಕಾರಿ ಈ ರೀತಿ ೮-೨೫ ಪೈಸೆ ಕೂಲಿ ಕೊಡುತ್ತಿದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಈಗಲಾದರೂ ಅವರ ಮೇಲೆ ಕ್ರಮ ತೆಗೆದುಕೊಂಡು ವ್ಯತ್ಯಾಸವನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ಒಂದು ಆಜ್ಞೆ ಬಂದಿರತಕ್ಕಂಥದ್ದು ೧-೯-೧೯೮೭ ರಿಂದ ಇದರ ಹಿಂದೆ ಅಂದರೆ ೧-೯-೧೯೮೭ರ ಹಿಂದೆ ಕೊಟ್ಟಿದ್ದರೆ, ಅವರಮೇಲೆ ಏನೂ ಕ್ರಮ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಗ್ರಾಮಾಂತರ ಪ್ರದೇಶದ ಜನರ ಹಿತವನ್ನು ಕಾಪಾಡುತ್ತೇವೆಂದು ಹೇಳತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡುವುದು ಚರ್ಚೆ ಮಾಡತಕ್ಕಂಥದ್ದು ಬೇರೆ. ಆದರೆ ಇಷ್ಟೊಂದು ಕಡಿಮೆ ಕೂಲಿಯನ್ನು ತೆಗೆದುಕೊಂಡು ಕೆಲಸ ಮಾಡತಕ್ಕಂಥದ್ದು ಬಹಳ ಕಷ್ಟ ಇದೆ ನಮ್ಮ ಮಾನ್ಯ ಸಚಿವರು ಹೇಳಿದಹಾಗೆ ೧೦ ರೂಪಾಯಿಗಳನ್ನು ಕೊಡುವಂತೆ ಜಾರಿಗೆ ತರುವುದಕ್ಕೆ ಮಾರ್ಪಾಡು ಮಾಡುತ್ತೀರಾ ಎಂದು ಕೇಳುತ್ತೇನೆ. ಚರ್ಚೆ ಮಾಡಿ ಜಾರಿಗೆ ತರುತ್ತೇವೆಂದು ಹೇಳಿದರೆ ನಮಗೆ ಏಷ್ಟು ಜವಾಬ್ದಾರಿ ಇರುತ್ತದೋ ಅಷ್ಟೇ ಜವಾಬ್ದಾರಿ ನಮಗೆ ಇರುತ್ತದೆ. ಆದ್ದರಿಂದ ತಾವು ೧೧-೧೨ ರೂಪಾಯಿಗಳ ಕೂಲಿಯನ್ನು ಕೊಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಚರ್ಚೆ ಮಾಡತಕ್ಕಂಥ ವಿಷಯ ಬೇರೆ. ನಮ್ಮ ಮುಂದೆ ಇರತಕ್ಕಂಥ ವಿಷಯವೇ ಬೇರೆ ಸರ್ಕಾರದ ಜವಾಬ್ದಾರಿಯನ್ನು ಹೊತ್ತವರು ಸರ್ಕಾರದ ಕಾರ್ಯಕ್ರಮಗಳಿಗೆ ಅನುಗುಣವಾಗಿ ಕೆಲಸ ಮಾಡಬೇಕು. ಇದು ನನಗೆ ಸಂಬಂಧಿಸಿದ್ದಲ್ಲ. ಇದಕ್ಕೆ ಸಂಬಂಧ ಪಟ್ಟವರಲ್ಲಿ ಚರ್ಚೆ ಮಾಡಿ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ಪ್ರಶ್ನೆ. ಇದು ಈ ಸದನದಲ್ಲಿ ಚರ್ಚೆಗೆ ಬರಲೇಬೇಕು. ಈ ದೇಶದಲ್ಲಿ ಸುಮಾರು ೩೬ ಸಾವಿರ ಟ್ರೇಡ್ ಯೂನಿಯನ್‌ಗಳು

ಇರುತ್ತವೆ. ವರ್ಷಂಪ್ರತಿ ಸಂಬಳವನ್ನು ಏರಿಸಿ ಏರಿಸಿ ಲಿವಿಂಗ್ ಇಂಡೆಕ್ಸ್ ಮಾಡುತ್ತಾರೆ. ಅಧಿಕಾರಿಗಳು ಮುಂದೆ ಅವರಿಗೆ ಬೇಕಾಗುತ್ತದೆ ಅದಕ್ಕೋಸ್ಕರ ಅವರನ್ನು ಸರಿಮಾಡಿಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ಲಿವಿಂಗ್ ಇಂಡೆಕ್ಸ್ ಅನ್ನು ತೀರ್ಪನ್ನು ಮಾಡುತ್ತಾರೆ. ಆದರೆ ಹಳ್ಳಿಗಳಲ್ಲಿರತಕ್ಕ ನಿರ್ಗತಿಕರಿಗೆ, ನಿವ್ನ ವರ್ಗದವರಿಗೆ, ಲಿವಿಂಗ್ ಇಂಡೆಕ್ಸ್‌ನ್ನು ಯಾರು ಫಿಕ್ಸ್ ಮಾಡುತ್ತಾರೆ ಎಂಬುದೇ ಮಾನ್ಯ ಯಡಿಯೂರಪ್ಪನವರು ಕೇಳುವ ಪ್ರಶ್ನೆ ಇದು. ಇದರಲ್ಲಿ ಒಂದು ಮೋಸ ಇದೆ.ಬಡವರುಯಾರು ಇದ್ದಾರೆ ನಿರ್ಗತಿಕರಾಗಿರತಕ್ಕಂಥವರು, ನಿವ್ನ ವರ್ಗದವರು, ಗುಡ್ಡಗಾಡಿನ ಜನರು, ಯಾರಿದ್ದಾರೆ, ಈವತ್ತಿಗೂ ಮರದ ಮೇಲೆ ವಾಸಮಾಡತಕ್ಕಂಥ ಜನರು ಯಾರು ಇದ್ದಾರೆ ಅವರ ಲಿವಿಂಗ್ ಇಂಡೆಕ್ಸ್‌ಗೂ ನಗರಗಳಲ್ಲಿರತಕ್ಕಂಥ ಜನರು ಲಿವಿಂಗ್ ಇಂಡೆಕ್ಸ್‌ಗೂ ಬಹಳ ವ್ಯತ್ಯಾಸವಿರುತ್ತದೆ. Economic inflationary trend will develop and ultimately prices of all the commodities will just increase and what happens to poor ? ಬಡವರ ಬಗ್ಗೆ ಇಂಥ ಒಂದು ವ್ಯವಸ್ಥೆಯನ್ನು ಮಾಡದೇ ಇದ್ದರೆ, ಅವರ ಉದ್ಧಾರ ಮಾಡುವುದಾದರೂ ಹೇಗೆ ? ಲಿವಿಂಗ್ ಇಂಡೆಕ್ಸ್ ಎಂದು ಹೇಳತಕ್ಕಂಥದ್ದು ಒಂದು ಮೋಸ. ಅಧಿಕಾರಿಗಳು ಫಿಕ್ಸ್ ಮಾಡತಕ್ಕಂಥದ್ದು ಮೋಸದ ಹಿನ್ನೆಲೆಯಲ್ಲಿ ಮಾಡುತ್ತಿದ್ದಾರೆ. They don't have purchasing capacity. You have not created purchasing capacity for the poor – when that being so how do you fix up this wage rate ? It is shameful. You have not tried to fix fair wages for the people who are living and working in the rural areas.

ಅವರಿಗೆ ಏನೂ ಗೊತ್ತಿಲ್ಲವೆಂದು ಹೇಳುತ್ತೇನೆ. ಈ ಬಗ್ಗೆ ಕಾರ್ಮಿಕ ಸಚಿವರೊಡನೆ ಸಮಾಲೋಚನೆ ಮಾಡಿ ನಾಳೆ ಇದೇ ಸಮಯದಲ್ಲಿ ಉತ್ತರಿಸಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಒಳ್ಳೆಯ ಸೈದ್ಧಾಂತಿಕ ವಿಚಾರವನೇ ಎತ್ತಿದ್ದಾರೆ. ನನಗೆ ಗೊತ್ತಿರುವ ಮಟ್ಟಿಗೆ ಲಿವಿಂಗ್ ಇಂಡೆಕ್ಸ್ ಅನ್ನು ಫಿಕ್ಸ್ ಮಾಡುವುದಕ್ಕೆ ಅನೇಕ ಆರ್ಥಿಕ ಸಂಸ್ಥೆಗಳು ಇವೆ. ನ್ಯಾಷನಲ್ ಸರ್ವೆ ಇದೆ. ಎನ್.ಎಸ್.ಎಸ್ ಪ್ರಕಾರ ಎಲ್ಲಾ ಮಾಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅದೆಲ್ಲಾ ಮೋಸ ಎಂದು ಹೇಳುತ್ತೇನೆ.

ಅಧ್ಯಕ್ಷರೇ.—ನೀವು ಅವರು ಕೂಡಿ ಚರ್ಚೆ ಮಾಡಿ ಏನು ಹೇಳಬೇಕೋ ಹೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ಚರ್ಚೆ ಮಾಡುವುದಕ್ಕೆ ಬದಲು ನನ್ನದೊಂದು ಸೂಚನೆ ಏನೆಂದರೆ, ಕಾರ್ಮಿಕ ಇಲಾಖೆಯ ಅಧಿಕಾರಿಗಳು, ತಪ್ಪು ಇಲಾಖೆಯ ಅಧಿಕಾರಿಗಳು, ತಾವು ಮಂತ್ರಿ ಕಾರ್ಮಿಕ ಸಚಿವರು ಸಂಬಂಧಪಟ್ಟ ಶಾಸನಸಭಾ ಸದಸ್ಯರನ್ನು ಕರೆಸಿ ಎಷ್ಟು ಕನಿಷ್ಠ ಕೂಲಿ ನಿಗದಿ ಮಾಡಬೇಕು, ಸೂಚ್ಯಂಕದ ಮೇಲೆ ಯಾವ ರೀತಿ ತುಟ್ಟಿಭತ್ಯ ನಿಗದಿ ಮಾಡಬೇಕು, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ತೀರ್ಮಾನ ಏನು ಎಂಬುದರ ಬಗ್ಗೆ.....

ಅಧ್ಯಕ್ಷರು.—ಶಾಸಕರ ಕನ್‌ಸಲ್ಟೇಟೀವ್ ಕಮಿಟಿ ಇದೆಯೆಲ್ಲಾ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅವರು ಅನುಭವಿಕರು; ಅವರಿಗೆ ಎಲ್ಲಾ ಗೊತ್ತಿದೆ. ಇದಲ್ಲವನ್ನೂ ಗೊತ್ತು ಮಾಡುವ ಸಾಧನೆ ಬೇರೆ ಇದೆ This is a policy matter. I cannot make a commitment. There is already an instrument to fix up wages. Over and above, if you say consult Legislators, consult the Minister, I cannot answer that question.

SRI B. BASAVALINGAPPA.—I have brought a specific issue through this Call Attention Notice. I have not received the answer from the Hon'ble Minister. The Hon'ble Minister is not certain about the answer. Let the Hon'ble Minister have consultation with the Labour Minister.

ಶ್ರೀ ಅಬ್ದುಲ್ ನಜೀರ್ ಸಾಬ್.– ಹಿರಿಯ ಸದಸ್ಯರಾದವರು ಈ ರೀತಿ ಮಾತನಾಡಿದರೆ ಉತ್ತರಿಸುವುದು ಕಷ್ಟವಾಗುತ್ತದೆ. ಆರ್.ಎಲ್.ಇ.ಜಿ.ಪಿ. ಹಾಗೂ ಎನ್.ಆರ್.ಇ.ಪಿ. ಕಾರ್ಯಕ್ರಮಗಳಲ್ಲಿ ಕನಿಷ್ಟ ವೇತನ ಏನು ಕೊಡುತ್ತಿದ್ದೀರೆಂದು ಕೇಳಿದ್ದಾರೆ. ಏನು ಕೊಡುತ್ತೇವೆಂಬುದನ್ನು ಹೇಳಿದ್ದೇವೆ. ಕನಿಷ್ಟ ವೇತನವನ್ನು ಯಾವ ರೀತಿ ಗೊತ್ತು ಮಾಡುತ್ತೀರಿ, ಯಾವ ರೀತಿ ಕೊಡಿಸುತೀರಿ ಎಂಬುದು ನನ್ನ ಪರಿಮಿತಿಯೊಳಗೆ ಬರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಸಚಿವರನ್ನು ಕೇಳಿದರೆ ಉತ್ತರಿಸುತ್ತಾರೆ. ಈ ಚಿಕ್ಕ ಪ್ರಶ್ನೆಗೆ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.–ಯಾವ ಆಧಾರದ ಮೇಲೆ ಕನಿಷ್ಟ ಕೂಲಿ ೯.೮೦ ಪೈಸೆ ಎಂದು ನಿಗದಿ ಮಾಡಿದಿರಿ? ಅದಕ್ಕೆ ಸರ್ಕಾರಿ ಆಜ್ಞೆ ಇದೆಯೇ? ಇದಕ್ಕೆ ಉತ್ತರ ಕೊಡಲಿ.

ಶ್ರೀ ಅಬ್ದುಲ್ ನಜೀರ್ ಸಾಬ್.–ಅದನ್ನು ನಾವು ಮಾಡಿಲ್ಲವೆಂದು ಹೇಳಿದೆ. ಅದನ್ನು ಮಾಡುವುದಕ್ಕೆ ಬೇರೆ ಇಲಾಖೆ ಇದೆ. ಲೇಬರ್ ಮತ್ತು ಸೋಷಿಯಲ್ ಡಿಪಾರ್ಟ್‌ಮೆಂಟಿನವರು ಕೂಲಿತನ ಎಷ್ಟು ಕೊಡಬೇಕೆಂದು ಮಾಡಿದ್ದಾರೆ. ಅವರ ಆಜ್ಞೆಯನ್ನು ನಾವು ಪಾಲಿಸುತ್ತೇವೆ.

ಅಧ್ಯಕ್ಷರು.–ಅವರ ಮೇಲೆ ಒಂದು ಗಮನ ಸೆಳೆಯುವ ಸೂಚನೆ ಕೊಡಿ.

ಶ್ರೀ ಎಂ.ಎಸ್. ಕೃಷ್ಣನ್.–ನಮ್ಮ ಪ್ರಶ್ನೆಗೆ ಉತ್ತರ ಹೇಳುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಾನು ಪಾಲಿಸಿ ಮ್ಯಾಟರ್ ಅನ್ನು ಎತ್ತಲಿಲ್ಲ. ನಿಮ್ಮ ಸುತ್ತೋಲೆ ಏನಿದೆ, ಅದರ ಬಗ್ಗೆ ನಿಮ್ಮ ತೀರ್ಮಾನ ಏನಿದೆ ಹೇಳಿ. ಈಗ ಮಾನ್ಯ ಕಾಂತ ಅವರು ಬಂದರು ಅವರು ಮತ್ತು ತಾವು ಕೂಲಿತು ಜಾರ್ಜ್ ಮಾಡಿ ತೀರ್ಮಾನ ಮಾಡಿ ಹೇಳಿ.

ಅಧ್ಯಕ್ಷರು.–ಹೆಚ್ಚಿನ ಮಾಹಿತಿ ಬೇಕಾದರೆ ಲೇಬರ್ ಮಿನಿಸ್ಟರ್ ಕಡೆಯಿಂದ ತರಿಸಿಕೊಳ್ಳಬಹುದು. ಇಲ್ಲಿಗೆ ಈ ವಿಷಯ ಮುಂಕ್ತಾಯವಾಯಿತು.

ಶ್ರೀ ಎಂ.ಎಸ್. ಕೃಷ್ಣನ್.–ತಾವು ಅದಕ್ಕೆ ಉತ್ತರ ಹೇಳಿ.

ಅಧ್ಯಕ್ಷರು.–ನೀವು ವಿವರವಾಗಿ ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಡಿ ಮತ್ತು ಕಾರ್ಮಿಕ ಸಚಿವರನ್ನು ಹಿಡಿಯಿರಿ.

ನಿಯಮ ೩೩ಳಿರ ಮೇರೆಗೆ

೧) ಸುಳ್ಯ ತಾಲ್ಲೂಕಿನಲ್ಲಿ ಪಂಜೂರಾದ ಹುಡ್ಕೋ ಜನತಾ ಮನೆಗಳ ಸಾಲದ ಕಂತನ್ನು ವಸೂಲು ಮಾಡದೆ ಇರುವುದು.

ಶ್ರೀ ಕೆ. ಕುಶಾಲ.–ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಸುಮಾರು ೧೫ ವರ್ಷಗಳ ಹಿಂದೆಯೇ ಪಂಜೂರಾದ ಹುಡ್ಕೋ ಜನತಾ ಮನೆಗಳ ನಿವೇಶನದಾರರು, ಸರ್ಕಾರದಿಂದ ಮಂಜೂರಾದ ನಿವೇಶನಗಳಲ್ಲಿ ವಾಸ್ತವಿಸಿಕೊಂಡು ಬರುತ್ತಿರುವರು. ಈ ಬಡ ನಿವೇಶನದಾರರು ಸದ್ರಿ ಮನೆಗಳನ್ನು ಹೊಂದಿಕೊಂಡು ವಾಸ್ತವಿಸುತ್ತಿರುವುದು. ೧೫ ವರ್ಷಗಳಾದರೂ ಈ ನಿವೇಶನದಾರ ಫಲಾನುಭವಿಗಳಿಗೆ, ಹುಡ್ಕೋ-ಜನತಾ ಯೋಜನೆ ಬಾಕಿ ಸಾಲದ ಕಂತನ್ನು ವಸೂಲಿ ಮಾಡುವ ಗೊಡವೆಗೆ ಸರ್ಕಾರ ಇಷ್ಟು ವರ್ಷದವರೆಗೆ ಹೋಗದೆ, ಈಗ ಒಂದು ವರ್ಷದಿಂದ ಈ ಫಲಾನುಭವಿಗಳಿಂದ ಒಮ್ಮೆಲೆ ಹುಡ್ಕೋ-ಯೋಜನೆ, ಜನತಾ ಯೋಜನೆ ಮನೆಗಳ ಬಾಕಿ ಕಂತುಗಳ ಅಸಲು ಹಾಗೂ ಬಡ್ಡಿ ತಲಾ ಒಬ್ಬೊಬ್ಬರಿಗೆ ರೂ. ೧೮೦೦ ದಿಂದ ಪೇಲ್ಪಟ್ಟು, ಸರ್ಕಾರಕ್ಕೆ ಪಾವತಿ ಮಾಡಲು ನೋಟೀಸು ಕೊಟ್ಟು ವಸೂಲಿ ಬಗ್ಗೆ ಜಪ್ತಿ ಹಾಗೂ ವಾಸ್ತವ್ಯದ ನಿವೇಶನದಾರರನ್ನು ಹೊರ ಹಾಕಿ ಬೀಗ ಮುದ್ರೆಗಳನ್ನು ಒತ್ತಿ ಶಿಸ್ತು ಕ್ರಮವನ್ನು ಕೆಲವು ಕಡೆಗಳಲ್ಲಿ ಮಾಡಿರುವುದು ತಿಳಿದು ಬರುತ್ತದೆ.

ಈ ನಿವೇಶನಗಳನ್ನು ಸುಮಾರು ೧೫ ವರ್ಷಗಳ ಹಿಂದೆ ಕಟ್ಟಿ ವಾಸ್ತವ್ಯಕ್ಕೆ ಕೊಟ್ಟಿದ್ದರೂ, ಈಗಾಗಲೇ ಈ ಕಟ್ಟಡ ದುರಸ್ತಿ ಇಲ್ಲದೆ, ಕೆಲವು ಬಿದ್ದುಹೋಗಿವೆ. ಉಳಿದವುಗಳಂ ಇವತ್ತು ನಾಳೆ ಬಿದ್ದು ಸಂಪೂರ್ಣ ಹಾಳಾಗುವ ಪರಿಸ್ಥಿತಿಯಲ್ಲಿವೆ. ಆ ಕಟ್ಟಡಗಳನ್ನು ಸಹ ಕಂಡು ಬಾಕಿಯಾಗಿ ಸರ್ಕಾರ ಏಲಂ ಹಾಕಿದರೂ ಫಲಾನುಭವಿಗಳು ಪಾವತಿಸಬೇಕಾದ ಹಣ ಈ ಕಟ್ಟಡಗಳಿಂದ ಬರಲಾರದು. ಅಲ್ಲದೆ